ಬೆಳ್ಳ-ಬೆಳಕು ಯೋಜನೆ

264 (584): ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಮಲಾಪುರ ಮತಕ್ಷೇತ್ರದ ಮಹಾಗಾಂವ್ ಗ್ರಾಮದ ಹಿಂದುಳಿದ ಬಡ ಜನರಿಗಾಗಿ ಇರುವ ಬೆಳ್ಳಿ ಬೆಳಕು ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ;

ಆ) ಯವ ವರ್ಷದಲ್ಲಿ ಮಂಜೂರು ಮಾಡಲಾಗಿದೆ;

ಇ) ಯೋಜನೆ ಅನುಷ್ಟಾನಗೊಳಿಸುವಲ್ಲಿ ವಿಳಂಬವಾಗಲು ಕಾರಣವೇನು; ಯಾವಾಗ ಪೂರ್ಣಗೊಳಿಸಲಾಗುವುದು;

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)ಮತ್ತು ಆ) ಜಿಲ್ಲಾಧಿಕಾರಿಗಳು ಗುಲ್ಬರ್ಗ ಇವರಿಂದ ಪ್ರಸ್ತಾನೆ ಬಂದಿರುತ್ತದೆ. ಅದನ್ನು ನಿರ್ದೇಶಕರು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತಿದೆ.

ಇ) ಅನುದಾನ ಲಭ್ಯತೆಯನ್ನು ಆಧರಿಸಿ ಬೆಳ್ಳ-ಬೆಳಕು ಯೋಜನೆಯಡಿಯಲ್ಲಿ ಮನೆಗಳನ್ನು ಮಂಜೂರು ಮಾಡಲಾಗುತ್ತಿದೆ. ಆದುದರಿಂದ ಅನುದಾನದ ಕೊರೆತೆಯಿಂದಾಗಿ ವಿಳಂಬವಾಗಿದೆ.

ರಾಜ್ಯದ ರೇಷ್ಮೆ ಬೆಳಗಾರರ ಹಿತಾಸಕ್ತಿ ಕಾಪಾಡುವ ಕುರಿತು

265 (253): ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ರೇಷ್ಮೆ ಉದ್ಯಮ ಮತ್ತು ಬೆಳಗಾರರ ಹಿತಾಸಕ್ತಿ ಕಾಪಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಆ) ಚೀನಾದ ರೇಷ್ಮೆಯ ಆಮದಿನಿಂದಾಗಿ, ರಾಜ್ಯ ರೇಷ್ಮೆ ಬೆಳೆಗಾರರು ಸಂಕಷ್ಟದಲ್ಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಚೀನಾದ ರೇಷ್ಮೆಯ ಮೇಲೆ ತೆರಿಗೆ ವಿಧಿಸಿ, ರಾಜ್ಯದ ಆದಾಯ ವೃದ್ಧಿಸುವಲ್ಲಿ ಮತ್ತು ಈ ಮೂಲಕ ರಾಜ್ಯದ ರೇಷ್ಮೆ ಬೆಳೆಗಾರರ ಉತ್ಪನ್ನಕ್ಕೆ ಬೇಡಿಕೆ ಹೆಚ್ಚಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ವಿವರ ನೀಡುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು) :

ಅ) ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ.

* ಹಿಪ್ಪುನೇರಳೆ ಕೃಷಿಯಲ್ಲಿ ಹನಿ ನೀರಾವರಿ ಪ್ರೋತ್ಸಾಹಿಸಲು ಸಹಾಯಧನ
* ಪ್ರತ್ಯೇಕ ಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ಸಹಾಯಧನ
* ಹೊಸ ಹಿಪ್ಪುನೇರಳೆ ತಳಿ ನರ್ಸರಿಗಳನ್ನು ಬೆಳೆಸಲು ಪ್ರೋತ್ಸಾಹಧನ
* ಚಾಕಿ ಸಾಕಾಣಿಕೆ ಕಟ್ಟಡಗಳ ನಿರ್ಮಾಣಕ್ಕೆ ಮತ್ತು ಚಾಕಿ ಸಾಗಾಣಿಕೆ ಸಲಕರಣೆಗಳಿಗೆ ಸಹಾಯಧನ

* ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಕಿಟ್ ಸರಬರಾಜು
* ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿಕೆ ಸಲಕರಣೆಗಳ ಖರೀದಿಗೆ ಸಹಾಯಧನ
* ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಸೋಂಕು ನಿವಾರಕಗಳ ಸರಬರಾಜು
* ಮೇಲ್ಚಿಎಂಡ್ ಘಟಕಗಳ ಸ್ಥಾಪನೆಗೆ ಸಹಾಯಧನ
* ಮೇಲ್ಚಿಎಂಡ್ ದ್ವಿತಳಿ ರೇಷ್ಮೆಗೆ ಪ್ರೋತ್ಸಾಹಧನ
* ಗೂಡಿನ ಗುಣಮಟ್ಟ ಮಾಪನ / ಕಚ್ಚಾ ರೇಷ್ಮೆ ಪರೀಕ್ಷೆ ಸಲಕರಣೆಗಳ ಖರೀದಿಗೆ ಸಹಾಯಧನ
* ವಿಸ್ತರಣೆ ಮತ್ತು ಪ್ರಚಾರ ಸಾಹಿತ್ಯ ಮುದ್ರಣ
* ಹೊಸ ಪ್ರದೇಶದಲ್ಲಿ ಉತ್ಪಾದಿಸಿದ ರೇಷ್ಮೆ ಗೂಡಿಗೆ ಮತ್ತು ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ
* ರೇಷ್ಮೆ ಬೆಳೆಗಾರರಿಗೆ ನೂಲು ಬಿಚ್ಚಾಣಿಕೆದಾರರಿಗೆ ಹೊಸ ತಾಂತ್ರಿಕತೆಗಳ ಬಗ್ಗೆ ತರಬೇತಿ ಒದಗಿಸುವುದು.

ಆ) ಬಂದಿದೆ.

ಇ) ಚೀನಾ ದೇಶದ ವ್ಯವಹಾರ ನೀತಿಯಿಂದಾಗಿ ರಾಜ್ಯದ ರೇಷ್ಮೆ ಬೆಳೆಗಾರರು ಸಂಕಷ್ಟದಲ್ಲಿ ಸಿಲುಕಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕೇಂದ್ರ ರೇಷ್ಮೆ ಮಂಡಳಿ ಮತ್ತು ರೇಷ್ಮೆ ಕೈಗಾರಿಕೆಯಲ್ಲಿ ತೊಡಗಿರುವ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕೇಂದ್ರದ ವಾಣಿಜ್ಯ ಮಂತ್ರಾಲಯಕ್ಕೆ ಮನವಿ ಸಲ್ಲಿಸಿ ಪ್ರಯತ್ನಿಸಿದ ಫಲವಾಗಿ ಚೀನಾ ದೇಶವು ಪ್ರತಿ ಕೆ.ಜಿ. ರೇಷ್ಮೆಗೆ ಕನಿಷ್ಟ 27.97 ಅಮೇರಿಕನ್ ಡಾಲರುಗಳ ದರಕ್ಕೆ ಕಡಿಮೆ ಇಲ್ಲದಂತೆ ಕಚ್ಚಾ/ ರೇಷ್ಮೆಯನ್ನು ರಫ್ತು ಮಾಡಬಹುದೆಂದು ಕೇಂದ್ರ ಸರ್ಕಾರದ ದಿನಾಂಕ 3.7.2003 ರಂದು ಆದೇಶ ಹೊರಡಿಸಿರುತ್ತದೆ. ಇದರಿಂದಾಗಿ ಸ್ಥಳೀಯ ಕಚ್ಚಾ ರೇಷ್ಮೆ ಹಾಗೂ ಗೂಡಿಗೆ ಉತ್ತಮ ಬೆಲೆ ಲಭ್ಯವಾಗುತ್ತಿದೆ.

ರಾಜ್ಯದ ರೈಲು ಮಾರ್ಗಗಳನ್ನು ಪೂರ್ಣಗೊಳಿಸಲು ಸರ್ಕಾರದಿಂದ ಬಾಕಿ ಇರುವ ಹಣ

266 (255): ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಮಂಗಳೂರು ರೈಲ್ವೆ ಯೋಜನೆ ಕಾಮಗಾರಿ ಯಾವ ಹಂತದಲ್ಲಿದೆ;

ಆ) ಇದಕ್ಕಾಗಿ ಬಜೆಟ್‌ನಲ್ಲಿ ನೀಡಿರುವ ಹಣ ಎಷ್ಟು; ಕೇಂದ್ರದಿಂದ ಬಂದ ಹಣ ಎಷ್ಟು; ವಿವರ ನೀಡುವುದು;

ಇ) ರಾಜ್ಯದ ಪಾಲನ್ನು ಸರಿಯಾಗಿ ನೀಡಿಲ್ಲವೆಂಬುದು ನಿಜವೇ; ರಾಜ್ಯ ಸರ್ಕಾರ ಎಷ್ಟು ಹಣ ನೀಡಿದೆ; ಎಷ್ಟು ಬಾಕಿ ಹಣ ನೀಡಬೇಕಿದೆ;

ಈ) ರಾಜ್ಯದ ಪಾಲನ್ನು ನೀಡುವಲ್ಲಿ ವಿಳಂಬವಾಗಲು ಕಾರಣಗಳೇನು;

ಉ) ಮಂಗಳೂರು-ಪುತ್ತೂರು ನಡುವಿನ ಸಂಚಾರ ಪ್ರಾರಂಭಗೊಂಡಿದೆಯೇ;

ಊ) ಹಾಸನ-ಮಂಗಳೂರು ನಡುವಿನ ರೈಲು ಸಂಚಾರವನ್ನು ಯಾವಾಗಿನಿಂದ ಪುನರ್ ಆರಂಭಿಸಲಾಗುವುದು?